# 12

# ಕೃಪೆಯಿಂದಲೇ ರಕ್ಷಣೆ

## (ಎಫೆಸ 2:1-10)

ಆದಿಕಾಂಡ 1 ಮತ್ತು 2ನೇ ಅಧ್ಯಾಯದ ಚರ್ಚೆಯಲ್ಲಿ ದೇವರ ಅಪರಿಮಿತವಾದ ಶಕ್ತಿಯ ಕುರಿತು ನೋಡಿದೆವು. ಎಫೆಸ 3:20, 21 ರಲ್ಲಿ ಪೌಲನು ಇದೇ ಅಂಶವನ್ನು ತಿಳಿಸಿರುವನು:

> ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್.

ನಾವು ಕೇಳುವದಕ್ಕಿಂತಲೂ, ಕನಸು ಕಂಡು ಬಯಸುವದಕ್ಕಿಂತಲೂ ಅಪರಿಮಿತವಾದ ಕಾರ್ಯಗಳನ್ನು ಮಾಡಲು ದೇವರು ಸಾಮರ್ಥ್ಯವುಳ್ಳವನಾಗಿರುವನು ಎಂದು ಪೌಲನು ತಿಳಿಸಿರುವನು. 1:19-23ರಲ್ಲಿ, ಪೌಲನು ಈ ಹಿಂದೆ, "ಆತನ ಬಲಾತಿಶಯವು ಎಷ್ಟು ಮಹತ್ತಾಗಿದೆ" ಎಂದು ತಿಳಿಸಿರುವನು, ಮತ್ತು ದೇವರು ಆ ಶಕ್ತಿಯನ್ನು ತನ್ನ ಜನರ ಕಡೆಗೆ ತಿರುಗಿಸಿರುವನು, ನಾವು ಬಲಹೀನರಾಗಿದ್ದರೂ, ನಾವು ಆತನ ಚಿತ್ತಕ್ಕೆ ಒಳಗಾದರೆ, ದೇವರು ನಮ್ಮ ಮೂಲಕ ಕಾರ್ಯಮಾಡುತ್ತಾನೆ. ದೇವರ ಶಕ್ತಿಯ ಕುರಿತಾಗಿ ಎಫೆಸ 2:1-10ರಲ್ಲಿ ಮುಂದುವರೆಯುತ್ತದೆ, ನಾಶವಾಗುತ್ತಿರುವ ಪಾಪಿಗಳ ರಕ್ಷಣೆಯ ಕುರಿತ ದೇವರ ಸಾಮರ್ಥ್ಯವನ್ನು ಪೌಲನು ತಿಳಿಸಿರುವನು (2:1ರಲ್ಲಿ ಆ ಚರ್ಚೆಯು ಮುಂದುವರೆಯುತ್ತದೆ).

ಪಾಪಿಗಳನ್ನು ರಕ್ಷಿಸುವ ಕಾರ್ಯವನ್ನು ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮಾತ್ರ ಮಾಡಿರುವನು. ಯೇಸು ತಾನೇ ಯೋಹಾನ 14:6 ರಲ್ಲಿ, "ನಾನೇ ಮಾರ್ಗವೂ, ಸತ್ಯವೂ ಜೀವವೂ ಆಗಿದ್ದೇನೆ, ನನ್ನ ಹೊರತು ಯಾರೂ ತಂದೆಯ ಬಳಿಗೆ ಬರಲಾರರು" ಎಂದು ಹೇಳಿರುವನು. ಅಪೊಸ್ತಲರು ಸಹ ಇದೇ ಸತ್ಯವನ್ನು ಆಧರಿಸಿ: "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" ಎಂದು ಹೇಳಿರುವರು (ಅಪೊಸ್ತಲರ ಕೃತ್ಯಗಳು 4:12). ಯೋಹಾನನು ಬರೆದು "ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವವುಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ" (1 ಯೋಹಾನ 5:12).

ಮಾನವ ಸಮೂಹವು ಕೇವಲ ಎರಡು ವಿಧವಾದ ಗುಂಪುಗಳಾಗಿ ವಿಂಗಡವಾಗಿದೆ: ಪರಿಪೂರ್ಣ ಯಜ್ಞಕ್ಕಾಗಿ ರಕ್ತವನ್ನು ಸುರಿಸಿರುವ ಯೇಸುವಿನಿಂದ ರಕ್ಷಿಸಲ್ಪಟ್ಟವರು ಹಾಗೂ ರಕ್ಷಿಸಲ್ಪಡದವರು, ಅವರು ನಾಶವಾಗಿ ಪಾಪಕ್ಷಮೆ ಹೊಂದಿರುವದಿಲ್ಲ.

### "ನೀವು ಸತ್ತವರಾಗಿದ್ದಿರಿ ..."

ಕ್ರಿಸ್ತನಿಲ್ಲದ ನಮ್ಮ ಜೀವಿತವನ್ನು ವಿವರಿಸಿ, ಪೌಲನು ನಾವುಗಳು ಕೇವಲ ಕಳೆದು ಹೋಗದೆ "ಸತ್ತವರಾಗಿದ್ದೆವು" ಎಂದಿರುವನು. "ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು": "ಮತ್ತು ಇಹಲೋಕಾಚಾಕ್ಕೆ ಅನುಸಾರವಾಗಿ ನಡೆದುಕೊಂಡಿರಿ" (2:1, 2ಎ). ಕ್ರಿಸ್ತನು ಇರದವರ ಪರಿಸ್ಥಿತಿಯ ಕುರಿತು ಪೌಲನು ಏಕೆ ಇಷ್ಟ

ಖಾರವಾಗಿ ನುಡಿದನು. ಮೊದಲನೆಯದಾಗಿ, ಅವರಲ್ಲಿ ದೇವರಿಗಾಗಿ ಯಾವುದೇ ಪ್ರತಿಕ್ರಿಯೆ ಇರುವದಿಲ್ಲ. ನಮ್ಮ ಪ್ರೀತಿ ಪಾತ್ರರು ಮರಣ ಹೊಂದಿದರೆ, ಅವರಿಗೆ ಏನೇ ಮಾಡಿದರು ಅದಕ್ಕೆ ಅವರ ದೇಹಗಳು ಸ್ಪಂದಿಸುವದಿಲ್ಲ ಏಕೆಂದರೆ ಅವರು ಮರಣಕ್ಕೆ ತುತ್ತಾಗಿದ್ದಾರೆ ಕ್ರಿಸ್ತನು ಇರದೆ ಹೋದರೆ, ನಾವು ದೇವರ ಮತ್ತು ಆತನ ಚಿತ್ತಕ್ಕೆ ಸ್ಪಂದಿಸುವದಿಲ್ಲ - ಯಾಕೆಂದರೆ ನಾವು ಸತ್ತಿದ್ದೇವೆ, ಎರಡನೆಯದಾಗಿ ಸತ್ತವರು ಪೂರ್ಣ ಅಸಹಾಯಕರಾಗಿರುವರು. ಸತ್ತವರು, ಸತ್ತವರೇ ಆಗಿದ್ದಾರೆ; ಅವರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವದಕ್ಕೆ ಮತ್ತು ಅವರ ಪರಿಸ್ಥಿತಿಯನ್ನು ಕಾಪಾಡಿಕೊಳ್ಳುವದಕ್ಕೆ ಅಸಹಾಯಕರಾಗಿದ್ದಾರೆ. ಕ್ರಿಸ್ತನ ಹೊರತು, ನಾವುಗಳು ಸಹ ಸತ್ತವರಾಗಿ, ನಮ್ಮ ಕಳೆದು ಹೋದ ಪರಿಸ್ಥಿತಿಯನ್ನು ಸರಿಪಡಿಸಿಕೊಳ್ಳಲು ಅಸಾಧ್ಯ. ಆದ್ದರಿಂದ, ಕ್ರಿಸ್ತನ ಹೊರತಾಗಿ ನಾವುಗಳು "ಸತ್ತವರೇ" ಎಂಬುದು ನಿಸ್ಸಂಶಯ.

ಆತ್ಮೀಕ ಮರಣದ ಕುರಿತು ಪೌಲನು ತನ್ನ ವ್ಯತ್ಯಾಸಗಳನ್ನು ಮುಂದುವರೆಸಿರುವನು: "ಆತ್ಮೀಕವಾಗಿ ಸತ್ತವರು ತಮ್ಮ ಅಪರಾಧ ಹಾಗೂ ಪಾಪದ ದೆಸೆಯಿಂದ ಸತ್ತಿರುವರು." ಒಂದು ಕಾಲದಲ್ಲಿ ನಾವುಗಳು ಇಂಥಹ ಪಾಪದಲ್ಲಿ "ನಡೆದೆವು" (ಜೀವಿಸಿದ್ದೆವು; ಈ ರೀತಿ NIV) ಇದ್ದರೂ, ನಾವು ಇಹಲೋಕದವರಾಗಿ ಜೀವಿಸುತ್ತಿದ್ದೆವು (ಈ ಲೋಕದ ಮಾರ್ಗದಲ್ಲಿ) ಹಾಗೂ "ವಾಯು ಮಂಡಲದಲ್ಲಿ ಅಧಿಕಾರ ನೆಡೆಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ ಅನುಸಾರವಾಗಿ ನಡೆದುಕೊಂಡಿರಿ" (2:2). ಈ ಮಾತನ್ನು ಸೈತಾನನ ಕುರಿತು ಹೇಳ ಲಾಗಿದೆ, ಒಂದು ಕಾಲದಲ್ಲಿ, ಅವನು ಭೂಮಿಯ ವಾಯುಮಂಡಲದಲ್ಲಿ ಇದ್ದ ದುಷ್ಟ ಶಕ್ತಿಗಳನ್ನು ಆಳುವವನಾಗಿದ್ದನು (6:11). ನಂತರದಲ್ಲಿ ಪೌಲನು ಕ್ರೈಸ್ತರಿಗೆ, "ಸೈತಾನನ ತಂತ್ರೋಪಾಯಗಳನ್ನು ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ" (6:16) ಅಂದನು. ಕೊರಿಂಥದವರಿಗೆ ಬರೆಯುವಾಗ ಸೈತಾನನ ಕುರಿತು ಪೌಲನು, "ಈ ಪ್ರಪಂಚದ ದೇವರು" (2 ಕೊರಿಂಥ 4:4) ಎಂದಿರುವನು. ನಾವು ದೇವರ ಅಧಿಕಾರವನ್ನು ನಿರಾಕರಣೆ ಮಾಡುವದಾದರೆ, ನಾವು "ಈ ಪ್ರಪಂಚದ ದೇವರನ್ನೇ" ಅನುಸರಿಸುವವರಾಗಿದ್ದೇವೆ ನಮ್ಮ ಉದ್ದೇಶ ಏನೇ ಇರಲಿ, ಇದು ಸತ್ಯ ಸಂಗತಿಯಾಗಿದೆ.

ದೇವರಿಲ್ಲದ ಜೀವಿತದ ಮಾದರಿಯ ಕುರಿತಾಗಿ ಪೌಲನು ಇನ್ನು ಹೆಚ್ಚಾಗಿ ಹೇಳಿರುವನು: "ಶರೀರ ಇಚ್ಛೆ ಅಂದರೆ ಮನುಷ್ಯನು ತನ್ನ ಸ್ವಾರ್ಥಕ್ಕೆ ಒಳಗಾಗಿ, ದೇವರ ಮಾರ್ಗವನ್ನು ಬಿಟ್ಟು ತನ್ನದೇ ಮಾರ್ಗದಲ್ಲಿ ಹೋಗುವದು. ನಾವು ಶರೀರ ಹಾಗೂ ಮನಸ್ಸಿನ ಇಚ್ಛೆಗಳಿಗೆ ಒಳಗಾದರೆ, ನಾವು ದೇವರ ಚಿತ್ತವನ್ನು ಅಲ್ಲಗಳೆದು, ನಮ್ಮ ಸ್ವಭಾವದ ದುರ್ವತನೆಗೆ ಒಳಗಾಗಿ ನಾಶವಾಗುತ್ತೇವೆ" (2:3). ಕ್ರಿಸ್ತನಲ್ಲಿರದ ಕೆಲವರಾದ ನಮ್ಮ ಜೀವಿತವು ಈ ರೀತಿ ಯಾಗಿರುತ್ತದೆ ಎಂದು ಪೌಲನು ಹೇಳದೆ; ಇದು "ಎಲ್ಲರಿಗೂ" ಅನ್ವಯಿಸಿ, ಕ್ರಿಸ್ತನಿಲ್ಲದಿದ್ದರೆ, ನಾವೆಲ್ಲರೂ ದೇವರ ಕೋಪಕ್ಕೆ ತುತ್ತಾಗುವೆವು ಎಂಬದೆ. "ದೇವರ ಕೋಪಕ್ಕೆ ತುತ್ತು" ಎಂದರೆ ಅವರ ಸ್ವಭಾವವು ಕೆಟ್ಟದೆ ಎಂಬ ಅರ್ಥವಾಗಿದೆ.

ಆತ್ಮೀಕ ಮರಣದಲ್ಲಿ ಮೂರು ಸ್ವಭಾವಗಳು ಅಡಕವಾಗಿವೆ, (ಮೋಸ ಸುರಕ್ಷೆ ಇಲ್ಲದ್ದಾಗ ಸುರಕ್ಷಿತವಾಗಿದ್ದೇವೆ ಎನ್ನುವುದು), ಅವಿಧೇಯತೆ (ಸ್ವಂತ ಇಚ್ಛೆಯಿಂದ ದೇವರಿಂದ ದೂರವಾ ಗುವದು), ಮತ್ತು ನಾಶ (ಅಂತ್ಯದಲ್ಲಿ ದೇವರ ಕೋಪಕ್ಕೆ ತುತ್ತಾಗುವದು) ಯೇಸುವಿನ ಆಗಮನದ ಮೊದಲು ಜನರು ಇದನ್ನೇ ಎದುರಿಸಿದ್ದರು. ನಾವು ಓದುವದನ್ನು ಮುಂದುವರೆ ಸುವವರೆಗೂ ಪೂರ್ಣ ನಿರೀಕ್ಷೆಯನ್ನು ಹೊಂದಲಾಗದು ...

## "ಆದರೆ ದೇವರು ..."

ಸತ್ಯವೇದದ ಎರಡು ಪ್ರಮುಖ ಪದಗಳನ್ನು ವಚನ 4ರಲ್ಲಿ ನೋಡುತ್ತೇವೆ: "ಆದರೆ ದೇವರು" ಸತ್ಯವೇದದ ಪ್ರಮುಖ ಪ್ರಸ್ತಾಪ "ದೇವರು" ಎಂಬದೆ, ಮತ್ತು ಯೇಸು

"... ದೇವರಲ್ಲಿ ಎಲ್ಲವೂ ಸಾಧ್ಯವೇ" ಎಂದಿರುವನು (ಮಾರ್ಕ 10:27). ದೇವರಿಲ್ಲದೆ ಹೋಗಿದ್ದರೆ, ನಾವೆಲ್ಲರು ನಿರೀಕ್ಷೆಯಿಲ್ಲದೆ ನಾಶವಾಗುತ್ತಿದ್ದೆವು. ರಕ್ಷಣೆಯು ನಮ್ಮ ಯೋಜನೆಯಿಂದ ಅಥವಾ ನಮ್ಮಿಂದ ಸಾಧಿಸಬಹುದೆಂದು ತಿಳಿಯಬಾರದು. ಈ ವಿಚಾರದಲ್ಲಿ ದೇವರು ಮುಂದಾಗುವದರಿಂದಲೇ ದೊರೆಯುತ್ತದೆ.

ಅವನು ದೇವರನ್ನು "ಕರುಣೆಯಲ್ಲಿ ಐಶ್ವರ್ಯವಂತನು" ಎಂದಿರುವನು. "ಆತನು ತನ್ನ ಮಹಾ ಪ್ರೀತಿಯಿಂದ ನಮ್ಮನ್ನು ಪ್ರೀತಿಸಿರುವನು" ತನ್ನ ಕರುಣೆಯಿಂದಲೇ ಹಾಗೂ ಪ್ರೀತಿಯಿಂದಲೇ ಕ್ರಿಸ್ತನೊಂದಿಗೆ ಬದುಕುವಂತೆ ಮಾಡಿದನು, ಕ್ರಿಸ್ತನೊಂದಿಗೆ ಎಬ್ಬಿಸಿ, ಮತ್ತು ಆತನೊಂದಿಗೆ ಪರಲೋಕದಲ್ಲಿ ಕೂಡಿಸಿದ್ದಾನೆ. ದೇವರ "ಐಶ್ವರ್ಯವುಳ್ಳ ಕರುಣೆ"ಯನ್ನು ತೋರುವದಕ್ಕಾಗಿ ದೇವರು ಇದನ್ನೆಲ್ಲಾ ಮಾಡಿರುವನು. ಕ್ರಿಸ್ತನಲ್ಲಿ "ದಯೆಯನ್ನು" ತೋರಿರುವನು (ವಚನ 7). ದೇವರು ನಮ್ಮನ್ನು ತನ್ನ ಮಗನೊಂದಿಗೆ ಸೇರಿಸಿರುವನು, ಯಾಕೆಂದರೆ ಆತನು ಸತ್ತು ಎದ್ದು ಬಂದಿರುವನು (ರೋಮಾಪುರ 6:1-5) ಆದ್ದರಿಂದ ನಾವುಗಳು ಆತನ ಸಂಗಡ ನಿತ್ಯತ್ವದಲ್ಲಿ ಪಾಲುಗಾರರಾಗುತ್ತೇವೆ.[1] ಯೇಸುವಿನ ಹಾಗೂ ಸುವಾರ್ತೆಯ ನಿಮಿತ್ತ ಹಾಗೂ ಆತನೊಂದಿಗೆ ಸೇರ್ಪಡೆ ಯಾಗಿರುವದರಿಂದ ಮಾತ್ರ ನಾವುಗಳು ನಿರೀಕ್ಷೆಯನ್ನು ಹೊಂದಿದ್ದೇವೆ.

## "ಕೃಪೆಯಿಂದಲೇ ... ನಂಬಿಕೆಯ ಮೂಲಕ"

ಗುಣ ಹೊಂದಲಾರದ ಪಾಪಿಗಳು ನಾವಾಗಿದ್ದರೂ, ದೇವರು ತನ್ನ ಪ್ರೀತಿಯನ್ನು ನಮಗೆ ಹೇಗೆ ನೀಡಬಹುದು ಎಂಬ ವಿಚಾರದಲ್ಲಿ ಆಶ್ಚರ್ಯವಾಗುತ್ತದೆ. ಪೌಲನು ಈ ಪ್ರಶ್ನೆಗೆ ಯೋಗ್ಯ ಉತ್ತರ ನೀಡಿರುವನು.

ದೇವರು ಇದನ್ನು ತನ್ನ "ಕೃಪೆಯಿಂದ ಮಾಡಿರುವನು" (2:5, 8). ಒಬ್ಬ ಬರಹಗಾರನು ಕೃಪೆಯನ್ನು ಈ ರೀತಿಯಾಗಿ ವಿವರಿಸಿರುವನು:

> ಕೃಪೆಯು ಅಪಾರವಾದ ಔದಾರ್ಯ, ನಿಸ್ವಾರ್ಥ, ಕರುಣೆಯಿಲ್ಲದವರಿಗೆ ಕರುಣೆ ಇತರರ ಕೊರತೆಗನುಗುಣವಾಗಿ ತೋರುವ ಪ್ರೀತಿ, ಅವನು ಅನರ್ಹನಾಗಿದ್ದರು ಅವನಿಗಾಗಿರುವದು ಕರುಣೆ.[2]

ಒಬ್ಬ ಚಿಕ್ಕ ಬಾಲಕನು ಹೇಳಿಕೆಯಿಂದ ಇದನ್ನು ಸರಳೀಕರಿಸಬಹುದು. "ನೀನು ಯೋಗ್ಯನಲ್ಲದಿದ್ದರೂ, ನಿನ್ನ ಅಗತ್ಯವನ್ನು ಹೊಂದುವದು" ಕೃಪೆಯಾಗಿದೆ.

ತಪ್ಪಿಹೋದ ಮಗನ ಸಾಮ್ಯದಲ್ಲಿ ಕೊಡುವ ಹಾಗೂ ತೆಗೆದುಕೊಳ್ಳುವ ವಿಚಾರವನ್ನು ಯೇಸು ತಿಳಿಸಿರುವನು ಲೂಕ 15. ಈ ವಿಶೇಷವಾದ ಕಥೆಯಲ್ಲಿ ತನ್ನ ತಂದೆಯಿಂದ ಸ್ವಾಸ್ತ್ಯವನ್ನು ಕೇಳಿದ ಮಗನ ಕುರಿತು ಯೇಸು ಹೇಳಿರುವನು. ಆ ಮಗನು ತನ್ನ ತಂದೆಯು ಸಾಯುವವರೆಗೆ ಕಾಯಲಿಲ್ಲ. ನಂತರ ಅವನು "ದೂರ ದೇಶಕ್ಕೆ ಹೋದನು" (ವಚನ 13), ಅಲ್ಲಿ ಅವನು ಅಯೋಗ್ಯವಾದ ಜೀವಿತವನ್ನು ಜೀವಿಸಿ ತನ್ನ ಆಸ್ತಿಯನ್ನೆಲ್ಲಾ ಕಳಕೊಂಡನು. ಅಲ್ಲಿ ಉಪವಾಸ ಪಟ್ಟು, ಹಂದಿಗಳನ್ನು ಕಾಯುವ ಹೀನವಾದ ಕೆಲಸವನ್ನು ಮಾಡಿದನು, ಆದರಿಂದ ಅವನು ಬದುಕುವದು ಅಸಾಧ್ಯವಾಯಿತು. ನಂತರ ಅವನು ತನ್ನ ತಂದೆಯ ಮನೆಗೆ ಹಿಂದಿರುಗಲು ನಿರ್ಧರಿಸಿದನು. ಅಲ್ಲಿ ಅವನು ತನ್ನನ್ನು ಮಗನೆಂದು ಕರೆಯದೆ, ಆಳುಗಳಲ್ಲಿ ಒಬ್ಬನಂತೆ ಕಾಣು ಎಂದು ಹೇಳಿದನು. ಇದರಿಂದ ಅವನು ಹಸಿವನ್ನು ತೀರಿಸಿಕೊಳ್ಳಬಹುದೆಂದು ತಿಳಿದು ಹಿಂತಿರುಗಿದನು. ಆದರೆ "ಅವನು ಇನ್ನು ದೂರವಿರುವಾಗಲೇ ಅವನ ತಂದೆಯು ಅವನನ್ನು ನೋಡಿದನು ಎಂದು" ಯೇಸು ಹೇಳಿದನು (ವಚನ 20). ಯಾಕಂದರೆ ಅವನು ಹೊರಟು ಹೋದದಂದಿನಿಂದ ಅವನ ತಂದೆಯು ಅವನಿಗಾಗಿ ಹಂಬಲಿಸುತ್ತಿದ್ದನು! ತಂದೆಯು ಅವನ ಬಳಿಗೆಹೋಗಿ ಅವನಿಗೆ ಮುದ್ದಿಟ್ಟನು.

ಅವನ ತಂದೆಯು ಅವನನ್ನು ಪ್ರೀತಿಯಿಂದ ಸ್ವೀಕರಿಸಿ ಔತಣವನ್ನು ಸಿದ್ಧ ಮಾಡಿದ್ದರಿಂದ, ಅವನ ಯಾವ ಮಾತನ್ನು ಆಲಿಸಲು ಸಮಯವಿರಲಿಲ್ಲ. ಅವನು ತನ್ನ ಮಗನಿಗೆ ಐಶ್ವರ್ಯವಂತನ ವಸ್ತ್ರಗಳನ್ನು ಹಾಕಿದನು, ಕುಟುಂಬಕ್ಕೆ ಸೂಚನೆಯಾದ ಉಂಗುರವನ್ನು ಅವನಿಗೆ ತೊಡಿಸಿದನು. ಅವನ ಗೌರವಾರ್ಥ ಔತಣವನ್ನು ಏರ್ಪಡಿಸಿದನು. ದೇವರಿಂದ ದೂರವಾದವರ ಕುರಿತು ಪೌಲನ ಹೇಳಿಕೆಯನ್ನೆ ಅವನು ಬಳಸಿದನು. "ಈ ನನ್ನ ಮಗನು *ಸತ್ತವನಾಗಿದ್ದನು,* ಅವನು ಈಗ ಬದುಕಿಬಂದಿದ್ದಾನೆ" (ಲೂಕ 15:24ಎ; ವಚನ 32; ಒತ್ತಿ ಹೇಳಿದ್ದು ನನ್ನದು). ಇಲ್ಲಿ ಪೌಲನು ತಿಳಿಸಿದ "ಕೃಪೆಯ" ಪರಿಪೂರ್ಣ ಚಿತ್ರಣವನ್ನು ನೋಡುತ್ತೇವೆ. ಲೂಕ 15ರಲ್ಲಿ: "ಕೃಪೆ" ಎಂಬ ಪದ ಬಳಕೆ ಇಲ್ಲದಿದ್ದರೂ, ತಿರಸ್ಕಾರಕ್ಕೆ ಒಳಗಾದ ತಪ್ಪಿತಸ್ಥ ಮಗನನ್ನು ಪ್ರೀತಿಯ ತಂದೆ ಆನಂದದಿಂದ ಸ್ವಿಕರಿಸಿದನು.

ಎಫೆಸ 2:4-10 ರಲ್ಲಿ, "ಕೃಪೆಯ" ಎರಡು ಸ್ವಭಾವಗಳನ್ನು ಪೌಲನು ವಿವರಿಸಿರುವನು. ಇದರ ಹೊರತು "ಕೃಪೆಯು" "ಕೃಪೆಯೇ" ಆಗಿರುವದಿಲ್ಲ.

**ದೇವರ ಕೃಪೆ ಉಚಿತಯಾಗಿದೆ**

ಮೊದಲನೆಯದಾಗಿ, ಕೃಪೆಯು ಉಚಿತವಾಗಿರುತ್ತದೆ. ಪೌಲನು ಅದನ್ನು "ದೇವರ ಕೃಪಾವರ" ಎಂದು ಹೇಳಿರುವನು (2:8ಬಿ). ಅದು ನಮ್ಮಿಂದುಂಟಾದದ್ದಲ್ಲ: ಅದು ಪುಣ್ಯಕ್ರಿಯೆಗಳಿಂದ ಉಂಟಾದದ್ದಲ್ಲಾ: "ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ" (2:9). ಒಂದು ವೇಳೆ ರಕ್ಷಣೆಯನ್ನು ನಮ್ಮ ಪ್ರಯತ್ನದಿಂದ ಸಂಪಾದಿಸುವದಾಗಿದ್ದರೆ ಅದಕ್ಕೆ ಕೃಪೆಯು ಅಗತ್ಯವಿಲ್ಲ. ಮತ್ತು ಯೇಸುವಿನ ಮರಣದಲ್ಲಿ ಯಾವ ಅರ್ಥವೂ ಇರುವದಿಲ್ಲ (ಗಲಾತ್ಯ 2:21).

ಜೀವನದಲ್ಲಿ ಅನೇಕ ಸಂಗತಿಗಳು ಸತ್ಯವಾಗಿಯೂ "ಉಚಿತವಾಗಿರುವದಿಲ್ಲ." ಕೆಲವು ಸಾರಿ ಜೀವವಿಮೆಯಲ್ಲಿ "ಕೃಪಾಸಮಯ" ಎಂಬುದಾಗಿ ತಿಳಿಸಿರುತ್ತಾರೆ, ಅಂದರೆ ತಡವಾಗಿ ಅದರ ಕಂತನ್ನು ಕಟ್ಟುವ ಸಮಯ. ಕೆಲವು ಕಾಲ ವಿಮೆಗೆ ಕಂತಿನ ಹಣವು ಸಂದಾಯವಾಗದಿದ್ದರೂ, ಆ ವಿಮೆ ಮುಕ್ತಾಯವಾಗದೆ ಇದು ಅದಕ್ಕಾಗಿ ನಿಗಧಿತ ಸಮಯವನ್ನು ನೀಡಿರುತ್ತಾರೆ. ಇದು ಒಂದು "ಕೃಪೆಯ" ಶಬ್ಧವಾಗಿದ್ದರೂ ಕೃಪೆಯಲ್ಲ. ಅಂದರೆ "ಮರಣಕ್ಕಾಗಿ ಕಾಯುವ ಸಮಯ" ಎಂಬ ಅರ್ಥ - ಯಾಕಂದರೆ ಅಲ್ಲಿ ಸಮಯವು ನಿಗಧಿತವಾಗಿದೆ, ಈ "ಕೃಪಾ ಸಮಯದೊಳಗಾಗಿ" ಹಣ ಸಂದಾಯವಾಗದಿದ್ದರೆ, ವಿಮೆಯು ಮುಕ್ತಾಯಗೊಳ್ಳುತ್ತದೆ. ಆದರೆ ಕ್ರಿಸ್ತನು ನೀಡುವ ಕೃಪೆಯು ಸತ್ಯವಾಗಿಯೂ "ಉಚಿತವಾಗಿರುತ್ತದೆ." ಈ ಸತ್ಯದ ವಿವರಣೆಗಾಗಿ, ಈ ಮುಂದಿನ ಪ್ರಶ್ನೆಗಳನ್ನು ಕೇಳಿಕೊಳ್ಳಿರಿ. "ದೇವರು ತನ್ನ ಮಗನನ್ನೇ ಕ್ರೂಜೆಯಲ್ಲಿ ಮರಣಕ್ಕೆ ಒಪ್ಪಿಸುವಂಥ ಯಾವ ಪ್ರೇರಣೆಯನ್ನು ನಾನು ನೀಡಿರುವೆನು?" ನನಗೆ ಬಿಡುಗಡೆ ಮಾಡುವಂಥ ಯೇಸುವಿನ ಮರಣಕ್ಕೆ, ನನ್ನ ಯಾವ ಕ್ರಿಯೆಯು ಆಧಾರವಾಗಿದೆ? ನನ್ನ ಯಾವ ಪ್ರಯತ್ನದ ಪ್ರಚೋದನೆಯಿಂದ ಸುವಾರ್ತೆಯು ಸೃಷ್ಟಿಯಾಗಿ, ಅದರಿಂದ ರಕ್ಷಣೆಗೆ ದೇವರ ಪ್ರೀತಿ ಉಂಟಾಯಿತೆ ಅಥವಾ ಸಭೆಯು ಆರಂಭವಾಯಿತೇ ... ಅಥವಾ ವಾಕ್ಯಗಳು ಉಂಟಾಗುವಂಥ ಪ್ರೇರಣೆ ನನ್ನಿಂದ ಉಂಟಾಯಿತೇ? ಪರಲೋಕದ ಬಾಗಿಲನ್ನು ತೆರೆಯುವಂಥ ಪ್ರಬೋಧನೆಯು ನನ್ನಿಂದ ಉಂಟಾಯಿತೇ? ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವೇನೆಂದರೆ, "ನನ್ನಿಂದ ಏನೂ ಆಗಿರುವದಿಲ್ಲ" ನಮ್ಮ ರಕ್ಷಣೆಯು ಸತ್ಯವಾಗಿಯೂ "ಕೃಪೆಯಿಂದಲೇ" ಉಂಟಾಯಿತು.

ಈ ದೇವರ ಕೃಪೆಯ ಕುರಿತಾಗಿ ಅರ್ಥಮಾಡಿಕೊಳ್ಳುವದು ನಮಗೆ ಕಷ್ಟವಾದಾಗ, ನಮ್ಮನ್ನು ನಾವು ರಕ್ಷಿಸಿಕೊಳ್ಳುವದಕ್ಕೆ ಏನಾದರೂ ಮಾಡಬೇಕು ಎಂದು ತಿಳಿದಿರಬಹುದು. ಒಬ್ಬ ಯುವಕನು ಯೇಸುವಿನ ಬಳಿಗೆ ಬಂದು "ನಾನು ನಿತ್ಯ ಜೀವವನ್ನು ಪಡೆಯಲಿಕ್ಕೆ ಏನು ಮಾಡಬೇಕು?" ಎಂದು ಕೇಳಿದವನ ಹಾಗಿದ್ದೇವೆ (ಮತ್ತಾಯ 19:16). ಅವನು

ಪರಲೋಕಕ್ಕೆ ಪ್ರವೇಶಮಾಡಲು ತಾನು ಏನಾದರು ಪ್ರಯತ್ನ ಮಾಡಬೇಕೆಂದು ಅವನು ತಿಳಿದಿದ್ದನು. ಆದರೆ ಯೇಸು ಅವನಿಗೆ ತೋರಿದ ಅಂಶವನ್ನು ಅವನು ಗ್ರಹಿಸಲಿಲ್ಲ. ಮತ್ತಾಯ 18:23-35 ರಲ್ಲಿರುವ ಸೇವಕರುಗಳಿಗೆ ನಮ್ಮನ್ನು ಹೋಲಿಸಿಕೊಳ್ಳುತ್ತೇವೆ, ಅವನು ತನ್ನ ಯಜಮಾನನಿಗೆ "ಕೋಟ್ಯಾಂತರ ಸಾಲ ಕೊಡಬೇಕಿತ್ತು" (ಒಬ್ಬ ಸಾಮಾನ್ಯ 150,000) ಹಾಗಿದ್ದರೂ, ಆ ಸೇವಕನು - ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲ ನಾನು ಕೊಟ್ಟು ತೀರಿಸುತ್ತೇನೆ ಅಂದನು (ವಚನ 36). ಅದು ಹಾಸ್ಯಸ್ಪದವಾದ ಉತ್ತರವಾಗಿತ್ತು! ಅಂತಹ ಸಾಲವನ್ನು ಯಾರು ತೀರಿಸಲಾಗದು ಸಹಜವಾಗಿ ಅವನು ಅದನ್ನು ತೀರಿಸಲು ಅಸಾಧ್ಯ ವಾಗಿತ್ತು. ಆದರೆ ಯೇಸು, ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು ಅಂದನು. ಇಲ್ಲಿ ಯೇಸುವಿನ "ಕೃಪೆ" ಎಂಬ ಪದವನ್ನು ಬಳಸದೆ; ಆ ಕಥೆಯಲ್ಲಿ ಸ್ಪಷ್ಟವಾದ ಅರ್ಥವನ್ನು ತಿಳಿಸಿದನು.

ದೇವರ ಕೃಪೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಏಕೆ ಕಷ್ಟಪಡುತ್ತೇವೆ? ಅಲ್ಲಿ ಕೆಲವು ಸರಳವಾದ ಉತ್ತರಗಳಿವೆ.

1. ನಮ್ಮ ಪ್ರಯತ್ನಕ್ಕೆ ತಕ್ಕ ಫಲವನ್ನು ಬಯಸುತ್ತೇವೆ. ನಾವುಗಳು ಚಿಕ್ಕವರಿದ್ದಾಗ "ಅದು ನ್ಯಾಯವಲ್ಲ!" ಎಂದು ಹೇಳುವ ಅಭ್ಯಾಸದವರಾಗಿದ್ದೆವು. ನ್ಯಾಯ ಬದ್ಧವಾದವುಗಳನ್ನು ಯತ್ನಿಸುತ್ತಿದ್ದೆವು. ಒಂದು ಆಟದ ಬೊಂಬೆಯ ಅಥವಾ ನಮ್ಮ ಬಡ್ತಿಯ ಸಂಬಂಧಿದಲ್ಲಿ ಅದು ಸರಿಯಾದ ಯತ್ನವೇ ಆಗಿದ್ದರೂ, ಕ್ಷಮಾಪಣೆಯ ಸಮಸ್ಯೆಯಲ್ಲಿ ಇದು ಸಿಂದುವಾಗುವದಿಲ್ಲ. ದೇವರ ನ್ಯಾಯಸ್ಥಾನದ ಮುಂದೆ ನಿಲ್ಲುವಾಗ, ನಾವು ನಮ್ಮ ಅರ್ಹತೆಗನುಗುಣವಾಗಿ ಪ್ರತಿಫಲವನ್ನು ಹೊಂದಲೇಬೇಕು - ಆ ಸಮಯದಲ್ಲಿ ಕೃಪೆಗಾಗಿಯೇ ಹಂಬಲಿಸುತ್ತೇವೆ.

2. ನಾವು ನಮ್ಮ ಪಾಪದ ಆಳದ ಗ್ರಹಿಕೆಯನ್ನು ಹೊಂದಿರುವದಿಲ್ಲ. ನಾವು ನಮ್ಮ ಪಾಪಗಳ ಕುರಿತಾಗಿ ಅವುಗಳು ಕೇವಲ "ಸಣ್ಣ ತಪ್ಪುಗಳೇ" ಎಂದು ತಿಳಿಯುವದಾದರೆ, ಕೃಪೆಯ ಅಗತ್ಯತೆಯನ್ನು ನಾವು ತಿಳಿಯಲಾರೆವು. ಪಾಪವನ್ನು ನಾವುಗಳು ಒಂದು ಚಿಕ್ಕ ಗಾಯವೆಂದು ತಿಳಿದು, ಅದರ ಚಿಕಿತ್ಸೆಯನ್ನು ನಾವುಗಳೇ ಮಾಡಿಕೊಳ್ಳುತ್ತೇವೆ ಎಂದು ತಿಳಿಯದೆ ಉತ್ತಮವಾದ ವೈದ್ಯರ ಸಹಾಯವನ್ನು ಪಡೆಯಬೇಕು. ದೇವರು ನಮ್ಮನ್ನು ನೋಡುವ ದೃಷ್ಟಿಕೋನದಲ್ಲಿ ನೋಡುವದಾದರೆ, ಕೃಪೆಯಿಂದ ಮಾತ್ರ ರಕ್ಷಣೆ ಎಂದು ತಿಳಿಯಬಹುದು. ಪೌಲನ ಪ್ರಕಾರ ಕೃಪೆಯ ಹೊರತು ನಾವು ಪಾಪದಲ್ಲಿ ಸತ್ತವರಾಗಿದ್ದೇವೆ. ಕೃಪೆಯೇ ನಮ್ಮ ನಿರೀಕ್ಷೆಯಾಗಿದೆ.

3. ನಾವು ನಮ್ಮ ಪಾಪದ ಪ್ರಜ್ಞೆಯ ಅರಿವನ್ನು ಹೊಂದಿರುತ್ತೇವೆ. ಇದು ಹಿಂದಿನ ಉತ್ತರಕ್ಕೆ ವಿರೋಧವಾಗಿದೆ. ಇತರರು ನಮ್ಮನ್ನು ಅರಿಯುವದಕ್ಕಿಂತಲೂ (ದೇವರನ್ನು ಹೊರತು ಪಡಿಸಿ), ನಾವು ಎಷ್ಟು ಪಾಪದಿಂದ ತುಂಬಿರುವೆವೆಂದು ಅರಿಯುತ್ತೇವೆ.ಒಂದು ವೇಳೆ ಆ ಸ್ವಭಾವವನ್ನು ಇತರರು ಅರಿಯದೆ ಇರಬಹುದು. ಇದನ್ನು ಅರಿತ ನಾವು, ನಮ್ಮ ಬಗ್ಗೆ ಸಕಲವನ್ನು ಅರಿತ ದೇವರನ್ನು ನಂಬುವದು ಕಷ್ಟಕರವೇ, ಆದರೂ ಆತನು ತಾನೇ ನಮಗೆ ಕೃಪೆಯನ್ನು ಒದಗಿಸುವವನು. ನಾವು ಅದಕ್ಕೆ ಅನರ್ಹವಾಗಿದದ್ದರಿಂದ, ಅದನ್ನು "ಕೃಪೆ" ಎನ್ನಲಾಗಿದೆ. ನಾವು ಇದನ್ನು ಯೇಸುವಿನ ಮೂಲಕ ಮಾತ್ರ ಪಡೆಯುತ್ತೇವೆ.

4. ದೇವರ ಸ್ವಭಾವದ ಕುರಿತು ಸರಿಯಾದ ಸಮತೋಲನವನ್ನು ನಾವುಗಳು ಹೊಂದಿರುವದಿಲ್ಲ. ನಮ್ಮ ಹಿನ್ನೆಲೆಯ ನಿಮಿತ್ತವಾಗಿ, ದೇವರ ವಾಕ್ಯದ ಪ್ರಕಾರ ಇರುವ ದೇವರ ಸರ್ವಭಾವಗಳನ್ನು ನಾವುಗಳು ಅರಿತಿರುವದಿಲ್ಲ. ಕೆಲವರು ದೇವರು ಯಾವಾಗಲು ತೀರ್ಪುಮಾಡುವವನು ಮತ್ತು ಅದಕ್ಕೆ ತಕ್ಕ ಶಿಕ್ಷೆಯನ್ನು ನೀಡುವವನು ಎಂದು ಆಲೋಚಿ ಸುತ್ತಾರೆ. ಸತ್ಯವನ್ನು ದೂರ ಇಡುವದು ಸಾಧ್ಯವಿಲ್ಲ! "ದೇವರು ಪ್ರೀತಿ" ಎಂದು ಸತ್ಯವೇದ ತಿಳಿಸುತ್ತದೆ (1 ಯೋಹಾನ 4:8) ಮತ್ತು "ಎಲ್ಲರೂ ರಕ್ಷಣೆಯನ್ನು ಪಡೆಯಬೇಕೆಂದು" ಅಪೇಕ್ಷಿ ಸುತ್ತದೆ (1 ತಿಮೊಥೆ 2:4). ಹೌದು ದೇವರು ಮಾನಸಾಂತರ ಹೊಂದದವರನ್ನು

ಮತ್ತು ನಂಬದೆ ಇರುವವರನ್ನು ತೀರ್ಪು ಮಾಡುತ್ತಾನೆ, ಆದಾಗ್ಯೂ ಆತನು ನಾವು ರಕ್ಷಿಸಲ್ಪಡ ಬೇಕೆಂದು ಅಪೇಕ್ಷಿಸುತ್ತಾನೆ. ಮತ್ತು ಯಾವ ಕಾರಣದಿಂದ ತನ್ನ ಮಗನನ್ನು ನಮ್ಮ ಪಾಪಗಳಿಗಾಗಿ ಮರಣಕ್ಕೆ ಒಪ್ಪಿಸಿನು.

5. ನಮ್ಮ ಕ್ಷಮಿಸಲಾರದ ಸ್ವಭಾವವನ್ನು ದೇವರ ಸಂಬಂಧಕ್ಕೆ ಹೋಲಿಸುತ್ತೇನೆ. ಕ್ಷಮಾಪಣೆಯ ಅನುಭವವನ್ನು ಹೊಂದದೆ ಇರುವವರ ಪರಿಸರದಲ್ಲಿ ನಾವುಗಳು ವಾಸಿಸುತ್ತಿದ್ದರೆ, ದೇವರು ನಮ್ಮನ್ನು ಕ್ಷಮಿಸುವನು ಎಂಬ ತತ್ವವನ್ನು ಸಂದೇಹಿಸಬಹುದು. ಇತರರನ್ನು ಕ್ಷಮಿಸಲಾರದವನನ್ನು, ದೇವರು ಕ್ಷಮಿಸುವನು ಎಂದು ನಂಬುವದು ಕಷ್ಟಕರ. ಆದರೆ ದೇವರು ಅಂಥವನಲ್ಲ. ಆತನು ಕ್ಷಮಿಸಲು ಬಯಸುತ್ತಾನೆ, ಆತನು ಕ್ಷಮಿಸುತ್ತಾನೆ; ಕೃಪೆಯಿಂದ ತನ್ನ ಮಕ್ಕಳನ್ನು ಕ್ಷಮಿಸುತ್ತಾನೆ.

6. ದೇವರ ಸೇವೆಯ ಕುರಿತು ತಪ್ಪಾದ ಭಾವನೆಗಳನ್ನು ಹೊಂದಿರುತ್ತೇವೆ. ನಮ್ಮಲ್ಲಿ ಪಾಪ ಪ್ರಜ್ಞೆ ಇರುವದರಿಂದ ದೇವರ ಸೇವೆಯನ್ನು ಮಾಡಲಾಗದು ಎಂಬ ತಪ್ಪು ಭಾವನೆಯನ್ನು ಕೆಲವರು ನೀಡಿರಬಹುದು ಅಥವಾ ದೇವರ ಬಯಕೆಗಳನ್ನು ಈಡೇರಿಸದೆ ಹೋದರೆ ನಮ್ಮಲ್ಲಿ ಕಸಿವಿಸಿ ಉಂಟಾಗಬಹುದು ಎಂಬಭಾವನೆ ಹೊಂದಿರಬಹುದು. ಪಾಪ ಮನೋಭಾವನೆ ಇದ್ದರೂ ಸೇವೆ ಮಾಡಲು ಮುಂದಾಗುವದು ಸತ್ಯವಾಗಿರುತ್ತದೆ. ನಮಗೆ ಮಹಾ ಉತ್ತೇಜನ ವನ್ನು ಆತನ ಕೃಪೆಯು ನೀಡುತ್ತದೆ - ದೇವರು ನಮ್ಮ ಪಾಪಗಳನ್ನು ಕ್ಷಮಿಸಿ, ಆತನ ಮಗನ ಮರಣದ ಮೂಲಕ ಕ್ಷಮಿಸುತ್ತಾನೆ. ನಮ್ಮನ್ನು ನಂಬಿಗಸ್ತರಾಗಿ ಇರುವ ಪರಿಣಾಮವನ್ನು ಬೀರುವ ಕೃಪೆಯನ್ನು ನಂಬುವದು ಶ್ರೇಷ್ಟವಾಗಿರುತ್ತದೆ.

7. ನಾವು ಎಲ್ಲವನ್ನು ಪರಿಪೂರ್ಣವಾಗಿ ಮಾಡಬೇಕು - ಇಲ್ಲದೆ ಹೋದರೆ! ನಮ್ಮ ಜೀವಿತ ದಲ್ಲಿರುವ ಪಾಪವನ್ನೆಲ್ಲಾ ತೆಗೆದುಹಾಕಿ, ಪರಿಪೂರ್ಣರಾಗಬೇಕು ಎಂಬ ಪ್ರಸ್ತಾವನೆಯನ್ನು ಹೊಂದಿರುತ್ತೇವೆ. ಅಂದರೆ ಕೆಲವು ಘಟನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬದೇ! ಕ್ರೂಜೆಯ ಮೂಲಕ ದೇವರು ನಮ್ಮನ್ನು ನಾವಿರುವಂತೆಯೇ ಅಂಗೀಕರಿಸುತ್ತಾನೆ, ಮತ್ತು ಪಾಪಗಳನ್ನೂ ನಿವಾರಿಸುತ್ತಾನೆ. ಅದೇ ರೀತಿಯಾಗಿ, ದೇವರು ಬಯಸುವಂಥ "ನ್ಯಾಯಯುತವಾದ" ಸಂಗತಿಯನ್ನು ಹೊಂದಿಕೊಂಡು ರಕ್ಷಣೆ ಹೊಂದಬೇಕು ಎಂದು ತಿಳಿದಿರುತ್ತೇವೆ. ದೇವರನ್ನು ಮೆಚ್ಚಿಸುವಂಥದ್ದೇ ಪ್ರತಿಯೊಬ್ಬನ ಧ್ಯೇಯವಾಗಿರಬೇಕು. ಕ್ರೈಸ್ತರು ಯಥಾರ್ಥವಾಗಿರಬೇಕು. ಅದಾಗ್ಯೂ ಅನೇಕ ವಿಚಾರದಲ್ಲಿ ನಾವುಗಳು ದೇವರನ್ನು ಪೂರ್ಣವಾಗಿ ಮೆಚ್ಚಿಸಲು ಅಸಾಧ್ಯ. ನಾವೆಲ್ಲರೂ ತಪ್ಪುಮಾಡಿ ಪಾಪಮಾಡಿದ್ದೇವೆ. ಆದರೆ ನಾವುಗಳು ಎಲ್ಲವನ್ನು ಪರಿಪೂರ್ಣವಾಗಿ ಮಾಡಬೇಕು ಎಂಬ ತಪ್ಪು ವಿಚಾರದಲ್ಲಿ ಅವಲಂಭಿಸದೆ, ದೇವರ ಕೃಪೆಯಲ್ಲೇ ನಿರೀಕ್ಷೆ ಹೊಂದಿರಬೇಕು (ಈ ವಿಚಾರದಲ್ಲಿ ಯಾಕೋಬ 2:10 ನೋಡಿರಿ).

ಒಂದು ವೇಳೆ ಕೃಪೆಯ ಉಚಿತವಾಗಿರದಿದ್ದರೆ, ಅದು "ಕೃಪೆ" ಎನಿಸಿಕೊಳ್ಳುವದಿಲ್ಲ ಆ ವಿಚಾರವನ್ನು ಅರ್ಥಮಾಡಿಕೊಳ್ಳುವರಿಗೆ ಯಾವುದೇ ಶಿಸ್ತನ್ನು ಹೊಂದಿರಲು ಸಾಧ್ಯವಿಲ್ಲ, ಆದರೆ ದೇವ ಕೃಪೆಗೆ ಒಂದು ಬಾರಿ ಒಳಗಾದರೆ, ಕರ್ತನಿಂದ ಅದ್ಭುತವಾದ ಆಶೀರ್ವಾದ ಗಳನ್ನು ಹೊಂದಲು ಸಾಧ್ಯತೆಗಳಿವೆ.

**ದೇವರ ಸಮೃದ್ಧಿಯಾದ ಕೃಪೆ**

ಎಂಬುದು ಅಗತ್ಯವಿರುವ ಎರಡನೆಯ ಅಂಶವಾಗಿರುತ್ತದೆ ಎಫೆಸ 1:7, 8 ಪೌಲನು ಬರ ೆದು, ಇದು "ದೇವರ ಕೃಪಾತಿಶಯವೇ," 6 ಮತ್ತು 7ನೇ ವಚನದಲ್ಲಿ ಆತನು ದಯಪಾಲಿಸಿರುವ "ಐಶ್ವರ್ಯ" ಎಂದಿದೆ. 2:4ರಲ್ಲಿ, ನಾವು ಕೃಪೆಯನ್ನು ಗ್ರಹಿಸುವಲ್ಲಿ ಇದು ಏಕೆ ಪ್ರಮುಖ ಅಂಶವಾಗಿದೆ? ಅಂದರೆ, ನಾವು ಪಾಪಿಗಳಾಗಿದ್ದಾಗ್ಯೂ, ದೇವರು ನಮ್ಮನ್ನು ಕ್ಷಮಿಸಲು ಚಿತ್ತೈಸಿದ್ದಾನೆ. ಕೃಪೆಯು ಉತ್ತಮ ಜನರಿಗಾಗಿ ಮಾತ್ರ ಮೀಸಲಾಗಿರುವದಿಲ್ಲ, ಇದನ್ನು ತಪ್ಪು

ಮಾಡಿದವರಿಗಾಗಿ ನೀಡಲಾಗಿದೆ - ಅದನ್ನು ಸಕಲ ಪಾಪಿಗಳಿಗಾಗಿ ನೀಡಲಾಗಿದೆ. 1 ತಿಮೊಥೆ 1:15ರಲ್ಲಿ ಪೌಲನು, "ಕ್ರಿಸ್ತ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು, ಆ ಪಾಪಿಗಳಲ್ಲಿ ನಾನೇ ಮುಖ್ಯಸ್ಥನು, ಹಾಗೆಯೇ, ಈ ಹಿಂದೆ ಅವನು ಯಾವ ರೀತಿಯಲ್ಲಿ ದೇವದೂಷಣೆಯನ್ನು ಮಾಡಿ ಕ್ರಿಸ್ತನನ್ನು ಅವಮಾನಿಸಿದ್ದೆನು" ಎಂದು ಹೇಳಿದ್ದರೂ, "ನಮ್ಮ ಕರ್ತನ ಕೃಪೆಯು ಅಧಿಕವಾಯಿತು" ಎಂದನು (1 ತಿಮೋಥೆ 1:14) ಏಕೆ? ದೇವರು ಪೌಲನನ್ನು ತನ್ನ ಕೃಪೆಗೆ ಒಳಪಡಿಸಿದ ಕಾರಣವೇನು? ಪೌಲನು ಅದನ್ನು ವಿವರಿಸಿ:

> ಆದರೆ ಇನ್ನು ಮುಂದೆ ನಿತ್ಯಜೀವಕ್ಕಾಗಿ ತನ್ನ ಮೇಲೆ ನಂಬಿಕೆಯಿಡುವವರಿಗೆ ತನ್ನ ದೀರ್ಘಶಾಂತಿಯ ದೃಷ್ಟಾಂತವಿರಬೇಕೆಂದು ಕ್ರಿಸ್ತ ಯೇಸು ಮುಖ್ಯಪಾಪಿಯಾದ ನನ್ನನ್ನು ಕರುಣಿಸಿ ನನ್ನಲ್ಲಿ ತನ್ನ ಪೂರ್ಣ ದೀರ್ಘಶಾಂತಿಯನ್ನು ತೋರ್ಪಡಿ ಸಿದನು (1 ತಿಮೊಥೆ 1:16).

ಪೌಲನಿಗೆ ದೊರಕಿದ ಈ ಕೃಪೆಯ ವಿಚಾರದಲ್ಲಿ ಯಾರೂ ಸಹ "ನಾನು ರಕ್ಷಣೆಗೆ ಪಾತ್ರನಲ್ಲ" ಎಂದು ಹೇಳುವ ಪ್ರಶ್ನೆ ಇರುವದಿಲ್ಲ. ದೇವರ ಕ್ಷಮಾಪಣೆಯ ಶಕ್ತಿಗೆ ಮೀರುವ ಯಾವುದೇ ಪಾಪವು ಇರುವದಿಲ್ಲ! ತಪ್ಪಿ ಹೋದ ಮಗನು ತಂದೆಯ ಬಳಿಗೆ ಹಿಂದಿರುಗಿದಾಗ, ಅವನು ಅದರ ಕುರಿತು ವಿವರಣೆ ನೀಡುವ ಅಗತ್ಯವಿರಲಿಲ್ಲ. ಅವನು ಈಗಾಗಲೇ ಪಾಪಿಯಾಗಿದ್ದನು ಎಂದು ಸಾಬೀತಾಗಿತ್ತು. ಅವನು ಏನು ಮಾಡಿದ ಎಂಬದಕ್ಕಿಂತಲೂ, ಅವನು ಹಿಂದಿರುಗಿದ ನಂತರ ಮನೆಯಲ್ಲಿ ಸಂಭವಿಸಿದ ಸಂಗತಿಯೇ ಪ್ರಮುಖವಾದದ್ದು.

ಕೃಪೆಯ ಉಚಿತವಾಗಿಯೂ, ಸಮೃದ್ಧಿಯಾಗಿಯೂ ಇರುತ್ತದೆ. ಆದ್ದರಿಂದ ಕ್ರೈಸ್ತ ಸಂದೇಶ ವನ್ನು "ಶುಭ ಸಂದೇಶ" ಎಂದು ಕರೆಯುತ್ತೇವೆ, ಅದು ಸುವಾರ್ತೆಯೇ!

## "ನಂಬಿಕೆಯ ಮುಖಾಂತರ"

ಕೃಪೆಯು ಉಚಿತವಾಗಿಯೂ, ಸಮೃದ್ಧಿಯಾಗಿಯೂ ಇದ್ದರೂ, ಅದು ಅಗ್ಗವಾಗಿ ರುವದಿಲ್ಲ. ಸುವಾರ್ತಾ ಸಂದೇಶದ ಮುಖಾಂತರ ಕೃಪೆಯನ್ನು ಎಲ್ಲರಿಗೂ ನೀಡಲಾಗಿದೆ, ಆದರೆ ಅದನ್ನು ಒಬ್ಬನು ಅಂಗೀಕರಿಸಿಕೊಳ್ಳಬೇಕು. ಆದ್ದರಿಂದ ಪೌಲನ ಹೇಳಿಕೆಯಂತೆ "ಕೃಪೆಯಿಂದ, ನಂಬಿಕೆಯಿಂದಲೇ ರಕ್ಷಣೆ ಹೊಂದಿದ್ದೇವೆ" ಎಂಬುದನ್ನು ಒಪ್ಪಿಕೊಳ್ಳಬೇಕು.

ಪುನಃ, ತಪ್ಪಿಹೋದ ಮಗನ ಕಥೆಯು ಉತ್ತಮವಾದ ನಿದರ್ಶನವಾಗಿದೆ. ಅವನು ತನ್ನ ಮನೆಗೆ ಹಿಂದಿರುಗುವ ಮೊದಲೇ, ತಂದೆಯು ಅವನನ್ನು ಅಂಗೀಕರಿಸಿದ್ದನು (ಅದು ಕೃಪೆಯೇ) ಆದರೂ, ಅವನು ಮನೆಗೆ ಹಿಂದಿರುಗುವವರೆಗೂ, ಅವನು ಸತ್ತವನೇ ಆಗಿದ್ದನು! ಮನೆಗೆ ಬಂದು ತಂದೆಯಿಂದ ಕೃಪೆಯನ್ನು ಹೊಂದಿದವನೇ ತಪ್ಪಿಹೋದ ಮಗನಂತಿರುವನು, ಅವನು ಹಿಂದಿರುಗಿದ ನಂತರ ಪ್ರೀತಿಯಿಂದಲೂ, ಆನಂದದಿಂದಲೂ ತನ್ನ ತಂದೆಗೆ ಸೇವೆ ಮಾಡುವವನಾಗಿದ್ದಾನೆ. ಪೌಲನ ಹೇಳಿಕೆಯಂತೆ, "ನೀತಿಕಾರ್ಯಗಳಿಂದ ರಕ್ಷಣೆಯನ್ನು ಹೊಂದುವದು ಅಸಾಧ್ಯವಾಗಿದ್ದರು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕ ಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು" (2:10). ಬದುಕು ಎಂದರೆ, ಅದು ನಮ್ಮ ಜೀವನದ ನಡೆಯಾಗಿರಬೇಕು.

ನಂಬಿಕೆಯು ಇತರೆ ಸದ್ಗುಣಗಳನ್ನು ಅಲಕ್ಷಮಾಡಬಾರದು. ಭರವಸವಿಡುವದು ಸಹ ಒಂದು ಸಂಗತಿಯಾಗಿರುತ್ತದೆ. "ಯೇಸುವನ್ನು ನಂಬುವದರಲ್ಲಿ" ಆತನನ್ನು ದೇವರು ಕಳುಹಿಸಿದ ಮಗನೆಂದು, ಹಾಗೂ ನಮ್ಮ ರಕ್ಷಕನೆಂದು ಅರಿಕೆ ಮಾಡುವವರಾಗಿದ್ದೇವೆ, ಹಾಗೂ ಆತನ ರಕ್ತದಲ್ಲಿ ನಮ್ಮ ಪಾಪಗಳನ್ನು ಕ್ಷಮಿಸುವ ಶಕ್ತಿ ಇದೆಯೆಂದು ಮತ್ತು ಜೀವ ನೀಡುವದೆಂಬ ಭರವಸೆಯಾಗಿದೆ. ನಂಬಿಕೆ ಎಂದರೆ, ನಮ್ಮನ್ನು ಆತನ ಕೈಗಳಿಗೆ ಒಪ್ಪಿಸುವದು, ಮತ್ತು ದೇವರ ಚಿತ್ತವು ನಮ್ಮಲ್ಲಿಯೂ, ಹಾಗೂ ನಮಗಾಗಿಯೂ ನೆರವೇರಿದೆ

ಎಂದು ನಂಬುವದೇ ಆಗಿದೆ, ಮತ್ತು ಕ್ರಿಸ್ತನು ನಮ್ಮ ಕೊರತೆಗಳನ್ನು ನೀಗಿಸುವನು ಎಂಬದೇ ನಂಬಿಕೆಯಾಗಿದೆ. ಕ್ರಿಸ್ತನು ಸತ್ತು ನಮ್ಮನ್ನು ಕೊಂಡು ಕೊಂಡಿರುವದಕ್ಕೆ ಆತನು ಮಾಡಿರುವ ಕಾರ್ಯವನ್ನು ನಂಬುವದೇ ಆಗಿದೆ. ನಮಗೆ ನಿಜವಾದ ನಂಬಿಕೆ ಇದ್ದರೆ, ನಾವು ದೇವರ ಅಪ್ಪಣೆಯನ್ನು ಪಾಲಿಸುತ್ತೇವೆ. ತಪ್ಪಿಹೋದ ಮಗನು ಹಂದಿಗಳು ವಾಸಿಸುತ್ತಿದ್ದ ಸ್ಥಳವನ್ನು ತ್ಯಜಿಸಿ, ತಂದೆಯ ಬಳಿಗೆ ಹಿಂದಿರುಗಿದ ಹಾಗೆ ಒಬ್ಬನು ಪಾಪದ ಸ್ವಭಾವವನ್ನು ತ್ಯಜಿಸಿ, ದೇವರಿಗಾಗಿ ವಿಧೇಯತೆಯುಳ್ಳ ಮಕ್ಕಳಾಗಿರಬೇಕು. ಪಂಚಾಶತ್ತಮದ ದಿನದಂದು ಪೇತ್ರನ ಓದುಗರು ಸಹೋದರರೇ, ಈಗ ನಾವೇನು ಮಾಡೋಣ? ಅಂದರು (ಅಪೊಸ್ತಲರ ಕೃತ್ಯಗಳು 2:37). ಪೇತ್ರನ ಧ್ವನಿಯಲ್ಲಿ ಆದೇಶ ಹಾಗೂ ವಾಗ್ದಾನ ಎರಡೂ ಇದ್ದವು. ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರೂ, "ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಅಂದನು (2:38). ಕ್ರಿಸ್ತನಲ್ಲಿನ ಜೀವನ ವಿಧಯತೆಯಲ್ಲಿ ಆರಂಭವಾಗುತ್ತದೆ. ನಂತರ ಒಬ್ಬ ಕ್ರೈಸ್ತನು ಸಾಯುವವರೆಗೆ ವಿಧೇಯತೆ ಹಾಗೂ ನಂಬಿಕೆಯ ಜೀವಿತದಲ್ಲಿ ಮುಂದುವರೆಯುವನು (ಇಬ್ರಿಯ 5:7-10; ಮತ್ತಾಯ 7:21-27; ಪ್ರಕಟನೆ 2:10).

ಈಗಿನ ಕಾಲದ ಅನೇಕ ನಂಬಿಕೆಗಳು ಕುಟಿಲವಾಗಿರುತ್ತದೆ. ನಂಬಿಕೆ ಎಂದರೆ ದೇವರ ಕುರಿತಾದ ಅಭಿಪ್ರಾಯದ ಆಯ್ಕೆಯಾಗಿರುವದಿಲ್ಲ. ಕೆಲವರು ಹೌದು ನಾನು "ದೇವರನ್ನು ನಂಬುತ್ತೇನೆ, ಹಾಗೂ ವಿಶ್ವಾಸ ಇಟ್ಟಿದ್ದೇನೆ" ಎಂದು ಬಾಯಿಮಾತಿನಲ್ಲಿ ಮಾತ್ರ ಹೇಳಬಹುದು. ಇಂತಹ ನಂಬಿಕೆ ಹೊಂದಿದ್ದ ತನ್ನ ಓದುಗರಿಗೆ ಯಾಕೋಬನು ಬರೆದು, "ದೇವರು ಒಬ್ಬನೇ ಎಂದು ನಂಬುವದು ಒಳ್ಳೆಯದೇ" ಇದನ್ನು ಮುಂದುವರೆಸಿ ಅವನು "ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ" ಅಂದನು (ಯಾಕೋಬ 2:19). ಅಂತಹ ವಿಧವಾದ "ನಂಬಿಕೆಯಿಂದ" ಯಾವ ದೆವ್ವಗಳಿಗೂ ರಕ್ಷಣೆಯಾಗಿರುವದಿಲ್ಲ. ನಂಬಿಕೆ ಎಂಬುದು ರಹಸ್ಯವಾದ ಸಂಗತಿಯಾಗಿರದೆ, ಅದು "ನಮ್ಮ" ಅಂತರಾಳದಲ್ಲಿಯೆ ಆರಂಭ ವಾಗಬೇಕು. ಅದು ನಮ್ಮ ದೈನಂದಿನ ಕಾರ್ಯಗಳಲ್ಲಿ ಪರಿಣಾಮ ಬೀರದೆ ಹೋದರೆ, ಅದು ನಂಬಿಕೆಯಾಗಿರುವದಿಲ್ಲ. ಇಬ್ರಿಯ 11ರಲ್ಲಿ, "ನಂಬಿಕೆಯಿಂದ ಹೇಬಲನು ಯಜ್ಞವನ್ನು ನಂಬಿಕೆಯಿಂದ ನೋಹನನು ಹಡಗನ್ನು ನಿರ್ಮಾಣಮಾಡಿ ನಂಬಿಕೆಯಿಂದ ಅಬ್ರಹಾಮನ ... ವಿಧೇಯನಾಗಿ, ನಂಬಿಕೆಯಿಂದ ಯಜ್ಞವನ್ನು ಸಮರ್ಪಿಸಿದನು." ಯಾವುದೋ ಒಂದು ಸಂಗತಿಯನ್ನು ನಂಬುವದು ನಂಬಿಕೆಯಲ್ಲ; ಸತ್ಯವಾದದನ್ನು ಆಚರಿಸುವದೇ ನಂಬಿಕೆಯಾಗಿರುತ್ತದೆ. ಗ್ರಂಥಗಳಲ್ಲಿನ ಸರಿಯಾದ ಸಿದ್ಧಾಂಥವನ್ನು ನಂಬುವದು ನಂಬಿಕೆಯಾಗಿರುವದಿಲ್ಲ. ಅಂತಹ ನಂಬಿಕೆಯು ಅದರಲ್ಲಿ ಒಳಗೊಂಡಿದ್ದರೂ (ಪೌಲನು ಕರೆದಿರುವ ಪ್ರಕಾರ 1 ಮತ್ತು 2 ತಿಮೊಥೆ), ಜೀವಿಸುವ ವಿಧೇಯತೆಯ ಹಾಗೂ ಸುಮ್ಮನೆ ನಂಬುವ ನಂಬಿಕೆಗೂ ವ್ಯತ್ಯಾಸವಿದೆ.

## "ನೀನು?"

"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ" (2:8ಎ). ಈ ಮಹಾ ಸತ್ಯವು, ರಕ್ಷಣೆಯ ಸಾಧ್ಯತೆಗಳನ್ನು ಮಾಡಿರುತ್ತದೆ ಈ ಸತ್ಯದ ಹೊರತಾಗಿ ರಕ್ಷಣೆಗೆ ಅವಕಾಶವಿರುವದಿಲ್ಲ.

"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ" ಎಂದು ಪೌಲನು ಯಾರ ಕುರಿತಾಗಿ ಮಾತಾಡುತ್ತಿರುವನು? ಸಾಧಾರಣವಾದ ಮಾನವರ ಕುರಿತು ಅವನು ಮಾತಾಡುತ್ತಿರುವದಿಲ್ಲ. ಕ್ರಿಸ್ತನಲ್ಲಿ ವಿಶ್ವಾಸಿಗಳಾಗಿದ್ದವರಿಗೆ ಬರೆಯುತ್ತಿರುವನು. ಎಫೆಸದವರ ಪತ್ರಿಕೆಯಲ್ಲಿ, "ಎಫೆಸದಲ್ಲಿರುವ ದೇವ ಜನರಿಗೂ ಕ್ರಿಸ್ತ ಯೇಸುವಿನಲ್ಲಿ ನಂಬಿಕೆಯಿಟ್ಟಿರುವವರಿಗೂ" ಎಂದು ಬರೆದಿರುವನು (1:1). ಎಫೆಸ 1:15ರಲ್ಲಿ, "ಕರ್ತನಾದ ಯೇಸುವಿನಲ್ಲಿ ನೀವು ಇಟ್ಟಿರುವ

ನಂಬಿಕೆಯನ್ನು ಕುರಿತು ದೇವರ ಜಮರೆಲ್ಲರಿಗೆ ನೀವು ತೋರಿಸುವ ಪ್ರೀತಿಯನ್ನು ಕುರಿತು ಕೇಳಿ'' ಎಂದು ಪೌಲನು ಮಾತನಾಡಿದನು. ಎಫೆಸ 1:2-5ರಲ್ಲಿ, ''ನೀವು'' ಎಂದು ಹೇಳಿ ಯಾರಿಗೆ ಬರೆಯುತ್ತಿರುವನೋ ಸೂಚಿಸಿದನು: ಅಪರಾಧ ಮತ್ತು ಪಾಪಗಳಿಂದ ಒಮ್ಮೆ ಸತ್ತವರಾಗಿದ್ದು, ಆದರೆ ಕ್ರಿಸ್ತನೊಂದಿಗೆ ಬದುಕಿಸಲ್ಪಟ್ಟ ವಿಶ್ವಾಸಿಗಳು.

ಲೋಕದ ಸಕಲ ಜನರನ್ನು ಉದ್ದೇಶಿಸಿ ಪೌಲನು ಬರೆಯುತ್ತಿರುವನು. ನಮ್ಮ ಪಾಪಗಳು ಯಾವುದೇ ಮಟ್ಟದ್ದಾಗಿದ್ದರೂ, ನಂಬಿಕೆಯಿಂದ ಕೃಪೆಯನ್ನು ಹೊಂದಬಹುದೆಂದು ಬರೆ ಯುತ್ತಿರುವನು. ದೇವರು ಬಹು ಬೆಲೆಬಾಳುವ ದಾನವನ್ನು ಕೊಂಡು ಕೊಂಡಿರುವನು, ನಾವು ಅದನ್ನು ನಂಬಿಕೆಯಿಂದ ಸ್ವೀಕರಿಸಬೇಕು, ಅದನ್ನು ನಾವು ತಿರಸ್ಕರಿಸ ಬಹುದೇ?

---

## ''ನಂಬಿಕೆ ಮತ್ತು ಸತ್ಕಾರ್ಯ'' ಈ ವಿಚಾರದ ಕುರಿತು ಯಾಕೋಬನು ಪೌಲನೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದನೇ?

(ಎಫೆಸ 2ರಲ್ಲಿರುವ ಹಾಗೆ) ಪೌಲನು ತನ್ನ ಅನೇಕ ಪತ್ರಿಕೆಗಳಲ್ಲಿ, ನಂಬಿಕೆಯಿಂದ ರಕ್ಷಣೆಯು ದೊರೆಯುತ್ತದೆ ವಿನ ಸತ್ಕಾರ್ಯದಿಂದಲ್ಲ ಎಂದಿರುವನು (ರೋಮಾಪುರ 3:28; ಗಲಾತ್ಯ 2:15-21).

ಯಾಕೋಬ 2ರಲ್ಲಿ: ''ಮನುಷ್ಯನು ನಂಬಿಕೆಯಿಂದಲೇ ನೀತಿವಂತನೆಂದು ನಿರ್ಣಯ ಹೊಂದುವನು'' ಬರೀ ನಂಬಿಕೆಯಿಂದಲ್ಲ ಎಂದು ನೋಡುತ್ತೇವೆ (ವಚನ 24); ''ಆತ್ಮವಿಲ್ಲದ ದೇಹವು ಸತ್ತದ್ದಾಗಿರುವದರಿಂದ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯು ಸತ್ತದ್ದೇ'' (ವಚನ 26). ಪೌಲ ಮತ್ತು ಯಾಕೋಬ ಈ ವಿಚಾರದಲ್ಲಿ ಪ್ರತ್ಯೇಕವಾದಗಳನ್ನು ಮಂಡಿಸಿರುವರು ಅಂದರೆ ಸತ್ಕ್ರಿಯೆಗಳಿಂದ ರಕ್ಷಣೆ ಎಂದು ಯಾಕೋಬನು, ನಂಬಿಕೆಯಿಂದ ರಕ್ಷಣೆ ಎಂದು ಪೌಲನು ಹೇಳಿರುವನು.

ಹಾಗೂ ಅವರಿಬ್ಬರು ಎರಡು ಪ್ರತ್ಯೇಕವಾದ ವಿಚಾರಗಳನ್ನು ತರ್ಕಿಸಿರುವರು. ಇಲ್ಲಿ ಪೌಲನು ಯೆಹೂದ್ಯರ ನಿಯಮದ ಕ್ರಿಯೆಗಳ ಕುರಿತು ಚರ್ಚಿಸುತ್ತಿರಬಹುದು (ಕ್ರಿಸ್ತನಲ್ಲಿನ ನಂಬಿಕೆಯೊಂದಿಗೆ) ಆ ವಿಧವಾದ ನಂಬಿಕೆಯು ರಕ್ಷಿಸುವದೆಂದು ಯಾಕೋಬನೂ ಸಹ ತಿಳಿಸುತ್ತಿರುವನು. ಅಂದರೆ ಕ್ರಿಯಾತ್ಮಕವಾದ ನಂಬಿಕೆಯು ರಕ್ಷಿಸುತ್ತದೆ ಎಂಬ ತರ್ಕವಾಗಿದೆ (ಕ್ರಿಯೆಯ ನಂಬಿಕೆ); ಇಲ್ಲದೆ ಹೋದರೆ ಆ ನಂಬಿಕೆಯು ಸತ್ತದ್ದೇ. ರಕ್ಷಿಸುವ ನಂಬಿಕೆಯ ಕುರಿತು ಪೌಲನ ಹೇಳಿಕೆಗೆ, ಯಾಕೋಬನ ಹೇಳಿಕೆಯು ಹೊರತಾಗಿರುವದಿಲ್ಲ.

> ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು. ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರ ಗೊಳ್ಳದೆ ಮಾಡುತ್ತಾರೋ ಅವರಿಗೆ ನಿತ್ಯ ಜೀವವನ್ನು ಕೊಡುವನು. ಯಾರು ಸ್ವೇಚ್ಛೆ ಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ ರೌದ್ರಗಳು ಬರುವವು. ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು - ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವವು - ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ. ದೇವರಿಗೆ ಪಕ್ಷಪಾತವಿಲ್ಲ (ರೋಮಾಪುರ 2:6-11).

ಪೌಲನ ದಿವಸಗಳಲ್ಲಿನ ಕೇಳುಗರು ಅವನ ನಂಬಿಕೆಯಿಂದ ಕೃಪೆ ಎಂಬ ಹೇಳಿಕೆಯನ್ನು ಅಪಾರ್ಥ ಮಾಡಿಕೊಂಡಿದ್ದರು. ಅಂದರೆ ರಕ್ಷಣೆಗಾಗಿ ಜನರು ಯಾವ ಕಾರ್ಯಗಳನ್ನೂ ಮಾಡುವ ಅಗತ್ಯವಿಲ್ಲ ಎಂಬ ತತ್ವವೇ ಅದಕ್ಕೆ ಕಾರಣವಾಯಿತು. ಅಂದರೆ ಇನ್ನೂ ಕೆಲವರು

“ಸತ್ಯ ನಂಬಿಕೆಯಿಂದಲೂ” ರಕ್ಷಿಸಲ್ಪಡಬಹುದು ಎಂಬ ತರ್ಕವನ್ನು ಮಾಡಿದರು. ನಮ್ಮ ಪಾಪಗಳೇ, ದೇವರ ಕರುಣೆಯನ್ನು ಹೆಚ್ಚಿಸುತ್ತದೆ ಎಂದು ಕೆಲವರು ತಿಳಿದರು. ಆದರೆ ಈ ವಿಧವಾದ ತರ್ಕವನ್ನು ಪೌಲನು ಮಾಡಲಿಲ್ಲ (ರೋಮಾಪುರ 2:5-8; 6:1, 2).

ಒಂದು ವೇಳೆ ಪೌಲನ ಈ ತತ್ವಕ್ಕೆ ಪ್ರತಿಕ್ರಿಯಿಸಿ ಯಾಕೋಬನು ಸತ್ಕ್ರಿಯೆಯು ನಂಬಿಕೆ ಒಂದು ಭಾಗವಾಗಿದೆ ಎಂದು ಹೇಳಿರಬಹುದು. ಏನೇ ಇದ್ದರೂ ನಂಬಿಕೆಯು ದೇವರ ಪ್ರತಿಕ್ರಿಯೆಯ ಪರಿಣಾಮವಾಗಿದೆ ಎಂದು ಇಬ್ಬರೂ ಹೇಳಿರುವ ತತ್ವವಾಗಿದೆ.